# **ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: ಬುಲ್ ಟ್ರಾಲಿಂಗ್ ಮೀನುಗಾರಿಕೆಯನ್ನು ನಿಷೇಧಿಸಿ ಆದೇಶವನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ:
1) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ: 21001/13/2000-Fy(Ind) Vol.II, ದಿನಾಂಕ: 21-02-2013.
2) ಮೀನುಗಾರಿಕೆ ನಿರ್ದೇಶಕರ ಪತ್ರ ಸಂಖ್ಯೆ:ಎಂ.ಇ.ಎಫ್/26/2014-15 ದಿನಾಂಕ: 08-11-2016.
3) ಸರ್ಕಾರದ ಆದೇಶ ಸಂಖ್ಯೆ: ಪಸಂಮೀ/158/ಮೀಇಯೋ/2016 ದಿನಾಂಕ: 15-11-2016.
4) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: 21002/12/2011-Fy(Ind) ದಿನಾಂಕ: 30-01-2017.
5) ಕೇಂದ್ರ ಸರ್ಕಾರದ ಆದೇಶ ಸಂಖ್ಯೆ: F.No.21001/3/2014-Fy(Ind) ದಿನಾಂಕ: 10/11/2017.
6) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ:21001/09/2006 Fy-(Ind) Vol.III ದಿನಾಂಕ: 31-12-2020.
7) ಕೇಂದ್ರ ಸರ್ಕಾರದ ಮಾರ್ಗಸೂಚಿ ಪತ್ರದ ಸಂಖ್ಯೆ: 21001/03/2014-Fy (Ind) ದಿನಾಂಕ: 07-03-2018.
8) ಆದೇಶ ಸಂಖ್ಯೆ: ಪಸಂಮೀ/158/ಮೀಇಯೋ/2016, ದಿನಾಂಕ: 29-01-2021.
9) ಮೀನುಗಾರಿಕೆ ನಿರ್ದೇಶಕರ ಸಂಖ್ಯೆ: ಮೀನಿ/19/ಎಂಇಎಫ್/2020, ದಿನಾಂಕ: 07-01-2021.

1- FEB 2021

**********

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ಕೇಂದ್ರ ಸರ್ಕಾರದ ಪತ್ರದಲ್ಲಿ, ರಾಜ್ಯ ಸರ್ಕಾರಗಳಿಗೆ "territorial water" ನಲ್ಲಿ ಜವಾಬ್ದಾರಿಯುತ ಮೀನುಗಾರಿಕೆ ವಿಧಾನಗಳನ್ನು ಅಳವಡಿಸಲು ಹಾಗೂ ಬುಲ್ ಟ್ರಾಲಿಂಗ್ ಮೂಲಕ ಮೀನುಗಾರಿಕೆ ಮಾಡುವುದನ್ನು ನಿಷೇಧಿಸಲು ಎಲ್ಲ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿತ್ತು.

ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಮೀನುಗಾರಿಕೆ ನಿರ್ದೇಶಕರ ಪತ್ರದಲ್ಲಿ, 12 ನಾಟಿಕಲ್ ಮೈಲಿವರೆಗಿನ ಪ್ರದೇಶದಲ್ಲಿ ಬುಲ್ ಟ್ರಾಲಿಂಗ್ ಮೀನುಗಾರಿಕೆಯನ್ನು ನಿಷೇಧಿಸುವುದು ಸೂಕ್ತವೆಂದು Central Institute of Fisheries Technology ಇವರು ಅಭಿಪ್ರಾಯಪಟ್ಟಿದ್ದು, ಕೇಂದ್ರ ಸರ್ಕಾರದ ದಿನಾಂಕ: 12-11-2014 ರ New guidelines for conduct of fishing operation in Indian Exclusive Economic Zone ರನ್ವಯ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಬರುವ Exclusive Economic Zone ನಲ್ಲಿ ಬುಲ್ ಟ್ರಾಲಿಂಗ್ ಮೀನುಗಾರಿಕೆಗೆ ಅನುಮತಿ ನೀಡದೇ ಇದ್ದುದರಿಂದ, ಕರ್ನಾಟಕ ಕಡಲು ಮೀನುಗಾರಿಕೆ ಕಾಯ್ದೆ 1986ರ Section-3 ರ Sub-section (1)(d) ಅಡಿಯಲ್ಲಿ ನೀಡಿರುವ ಅಧಿಕಾರದನ್ವಯ ಕರ್ನಾಟಕ ರಾಜ್ಯದ 12 ನಾಟಿಕಲ್ ಮೈಲಿವರೆಗಿನ ಪ್ರದೇಶದಲ್ಲಿ ಬುಲ್ ಟ್ರಾಲಿಂಗ್ ಮೀನುಗಾರಿಕೆಯನ್ನು ನಿಷೇಧಿಸಿ ಅಧಿಸೂಚನೆ ಹೊರಡಿಸುವಂತೆ

ಕೋರಿಕೊಂಡ ಹಿನ್ನೆಲೆಯಲ್ಲಿ ಮೇಲೆ ಕ್ರಮ ಸಂಖ್ಯೆ (3) ರಲ್ಲಿ ಓದಲಾದ ಆದೇಶದಲ್ಲಿ, ಕರ್ನಾಟಕ ರಾಜ್ಯದ 12 ನಾಟಿಕಲ್ ಮೈಲಿ (territorial water) ವರೆಗಿನ ಪ್ರದೇಶದಲ್ಲಿ ಬುಲ್ ಟ್ರಾಲಿಂಗ್ ಮೀನುಗಾರಿಕೆಯನ್ನು ನಿಷೇಧಿಸಿ ಆದೇಶಿಸಲಾಗಿತ್ತು.

ಸದರಿ ನಿಷೇಧ ಆದೇಶವನ್ನು ಪ್ರಶ್ನಿಸಿ, ಮಲ್ಪೆ ಟ್ರಾಲ್ ಬೋಟ್ ಮೀನುಗಾರರ ತಾಂಡೇಲರ ಸಂಘ, ಮಲ್ಪೆ ಇವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಸಂ: WP-51856/2019 ಅನ್ನು ದಾಖಲಿಸಿರುತ್ತಾರೆ. ಈ ಕುರಿತು ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 10/12/2020 ರಂದು ಹೊರಡಿಸಿರುವ ದೈನಂದಿನ ಆದೇಶದಲ್ಲಿ ರಾಜ್ಯ ಸರ್ಕಾರವು ಬುಲ್ ಟ್ರಾಲಿಂಗ್ ನಿಷೇಧಿಸಿ ಹೊರಡಿಸಿರುವ ದಿನಾಂಕ: 15-11-2016ರ ಆದೇಶದ ಹಿನ್ನೆಲೆಯನ್ನು ಪರಿಗಣಿಸಿ ಈ ಕೆಳಗಿನಂತೆ ನಿರ್ದೇಶಿಸಿರುತ್ತದೆ:

> We have perused the order at Annexure-A. The said order has been passed for giving effect to the order of the Government of India 12th November 2014.
>
> Our attention is invited to Annexure-C which is the order dated 13th January 2017 issued by the Government of India, by which, order dated 12th November 2014 has been withdrawn.
>
> Thus, the very basis for passing the order at Annexure-A does not exist now. We, therefore, direct the State Government to consider the question whether the order dated 15th November 2016 deserves to be cancelled or rescinded. Appropriate decision shall be taken by the State Government within a period of one month from today.

ಅದರಂತೆ, ಮೇಲೆ ಕ್ರಮ ಸಂಖ್ಯೆ (8)ರಲ್ಲಿ ಓದಲಾದ ಆದೇಶದಲ್ಲಿ, ದಿನಾಂಕ: 15-11-2016ರ ಆದೇಶವನ್ನು ಹಿಂಪಡೆಯಲಾಗಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ಆದೇಶದಲ್ಲಿ, ಕೇಂದ್ರ ಸರ್ಕಾರವು ದಿನಾಂಕ: 12/11/2014ರ ಆದೇಶದನ್ವಯ ಹೊರಡಿಸಲಾಗಿದ್ದ ಮಾರ್ಗಸೂಚಿಗಳನ್ನು ಹಿಂಪಡೆದಿರುತ್ತದೆ. ಮುಂದುವರೆದು, ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಕೇಂದ್ರ ಸರ್ಕಾರದ ಆದೇಶದಲ್ಲಿ, ಬುಲ್ ಟ್ರಾಲಿಂಗ್ / ಪೇರ್ ಟ್ರಾಲಿಂಗ್ ಹಾಗೂ ಲೈಟ್ ಫಿಶಿಂಗ್ (ಬೆಳಕು ಮೀನುಗಾರಿಕೆ) ಅನ್ನು ಸಾರ್ವತ್ರಿಕವಾಗಿ ಅನ್ವಯವಾಗುವಂತೆ ನಿಷೇಧಿಸಿ ಸ್ಪಷ್ಟ ಆದೇಶ ಹೊರಡಿಸಿರುತ್ತದೆ.

ದಕ್ಷಿಣ ಕನ್ನಡ ಜಿಲ್ಲಾ ಮೂಲ ಮೀನುಗಾರರ ಸಹಕಾರ ಸಂಘ (ನೋಂ), ಮಂಗಳೂರು ಇವರು ದಿನಾಂಕ: 29-11-2020 ಪತ್ರದಲ್ಲಿ ಭಾರತ ಸರ್ಕಾರಕ್ಕೆ ಮನವಿ ಸಲ್ಲಿಸಿ ಬುಲ್ ಟ್ರಾಲಿಂಗ್ ಹಾಗೂ ಲೈಟ್ ಫಿಶಿಂಗ್ (ಬೆಳಕು ಮೀನುಗಾರಿಕೆ) ಅನ್ನು ನಿಷೇಧಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಮನವಿ ಸಲ್ಲಿಸಿರುತ್ತಾರೆ.

Kamakshi U.A
30/1/21

ಈ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ಕೇಂದ್ರ ಸರ್ಕಾರವು ಮೇಲೆ ಕ್ರಮ ಸಂಖ್ಯೆ (6)ರಲ್ಲಿ ಓದಲಾದ ಪತ್ರದಲ್ಲಿ, ಮೇಲೆ ಕ್ರಮ ಸಂಖ್ಯೆ (5)ರಲ್ಲಿ ಓದಲಾದ ಆದೇಶದಲ್ಲಿ ಬುಲ್ ಟ್ರಾಲಿಂಗ್ / ಪೇರ್ ಟ್ರಾಲಿಂಗ್ ಮೀನುಗಾರಿಕೆಗಳನ್ನು ಈಗಾಗಲೇ ನಿಷೇಧಿಸಲಾಗಿದೆ ಮತ್ತು ಮೇಲೆ ಕ್ರಮ ಸಂಖ್ಯೆ (7)ರಲ್ಲಿ ಓದಲಾದ ಪತ್ರದಲ್ಲಿ, ಹೊಸ ಮಾರ್ಗಸೂಚಿಗಳನ್ನು ಜಾರಿಗೊಳಿಸಲಾಗಿದೆ ಎಂದು ಸ್ಪಷ್ಟಪಡಿಸಿದೆ.

ಮೇಲೆ ಕ್ರಮ ಸಂಖ್ಯೆ (9)ರಲ್ಲಿ ಓದಲಾದ ನಿರ್ದೇಶಕರ ಪತ್ರದಲ್ಲಿ, ದಿನಾಂಕ: 15/11/2016ರ ಆದೇಶವನ್ನು ಹಿಂಪಡೆದು ಹೊಸದಾಗಿ ಟೆರಿಟೋರಿಯಲ್ (12 ನಾಟಿಕಲ್ ಮೈಲಿವರೆಗಿನ ಕಡಲು ನೀರು ಪ್ರದೇಶ) ನೀರಿನ ಭಾಗದಲ್ಲಿ ಬುಲ್ / ಪೇರ್ ಟ್ರಾಲಿಂಗ್ ಅನ್ನು ಮತ್ತು ಲೈಟ್ ಫಿಶಿಂಗ್ (ಬೆಳಕು ಮೀನುಗಾರಿಕೆ) ಅನ್ನು ನಿಷೇಧಿಸಿ ಆದೇಶ ಹೊರಡಿಸಲು ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಜವಾಬ್ದಾರಿಯುತ ಹಾಗೂ ಸುಸ್ಥಿರ ಮೀನುಗಾರಿಕೆಯನ್ನು ಖಚಿತಪಡಿಸುವ ಹಾಗೂ ಮತ್ಸ್ಯಕ್ಷಾಮವನ್ನು ತಡೆಗಟ್ಟುವ ನಿಟ್ಟಿನಲ್ಲಿ ಬುಲ್ ಟ್ರಾಲಿಂಗ್ / ಪೇರ್ ಟ್ರಾಲಿಂಗ್ ಮತ್ತು ಲೈಟ್ ಫಿಶಿಂಗ್ (ಬೆಳಕು ಮೀನುಗಾರಿಕೆ)ಯನ್ನು ನಿಷೇಧಿಸುವುದು ಅಗತ್ಯವೆಂದು ಸರ್ಕಾರವು ಮನಗಂಡು ಕೆಳಕಂಡಂತೆ ಆದೇಶಿಸಿದೆ.

**<u>ಆದೇಶ ಸಂ: ಪಸಂಮೀ/158/ಮೀಇಯೋ/2016, ಬೆಂಗಳೂರು, ದಿನಾಂಕ: 30-01-2021</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಕಡಲು ಮೀನುಗಾರಿಕೆ ಕಾಯ್ದೆ 1986ರ ಸೆಕ್ಷನ್-3ರ ಸಬ್-ಸೆಕ್ಷನ್ (1)(ಡಿ) ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರದನ್ವಯ ರಾಜ್ಯದ ಟೆರಿಟೋರಿಯಲ್ (12 ನಾಟಿಕಲ್ ಮೈಲಿವರೆಗಿನ ಕಡಲು ನೀರು ಪ್ರದೇಶ) ನೀರಿನ ಭಾಗದಲ್ಲಿ ಬುಲ್ ಟ್ರಾಲಿಂಗ್ / ಪೇರ್ ಟ್ರಾಲಿಂಗ್ ಮತ್ತು ಲೈಟ್ ಫಿಶಿಂಗ್ (ಬೆಳಕು ಮೀನುಗಾರಿಕೆ)ಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿಷೇಧಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

Kamakshi U.A 30/1/21
(ಕಾಮಾಕ್ಷಿ ಯು.ಎ.)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ
(ಮೀನುಗಾರಿಕೆ)

**ಇವರಿಗೆ:**

1) ಪ್ರಧಾನ ಮಹಾಲೇಖಪಾಲರು (ಜಿ&ಎಸ್ಎಸ್ಎ)(ಇ&ಆರ್ಎಸ್ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
2) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
3) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
4) ಮೀನುಗಾರಿಕೆ ಹಿರಿಯ ಉಪ ನಿರ್ದೇಶಕರು, ಮಂಗಳೂರು / ಕಾರವಾರ / ಉಡುಪಿ.
5) ಸಂಬಂಧಪಟ್ಟ ಎಲ್ಲಾ ಮೀನುಗಾರಿಕೆ ಅಧಿಕಾರಿಗಳಿಗೆ – ಮೀನುಗಾರಿಕೆ ನಿರ್ದೇಶಕರ ಮುಖಾಂತರ.
6) ಮಾನ್ಯ ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರ ಆಪ್ತ ಕಾರ್ಯದರ್ಶಿರವರು, ವಿಧಾನಸೌಧ, ಬೆಂಗಳೂರು.
7) ಶಾಖಾ ರಕ್ಷಾ ಕಡತ / ಸಮನ್ವಯ-ಕಂಪೆಂಡಿಯಂ / ಹೆಚ್ಚಿನ ಪ್ರತಿಗಳು.